ಓ.ಎಸ್.ನಂ.100/2022

ಪಿ ಡಬ್ಲ್ಯೂ: 1

ದಿನಾಂಕ 25-03-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಿಂದಃ**

ನನಗೆ ಓದಲು ಬರೆಯಲು ಬರುವುದಿಲ್ಲ. ನಾನು 1 ನೇ ತರಗತಿವರೆಗೂ ಕಾಕೋಳದ ಸರ್ಕಾರಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಈಗ ಕಾಕೋಳ ಗ್ರಾಮ ಪಂಚಾಯತಿ ಸದಸ್ಯನಾಗಿರುತ್ತೇನೆ ಎಂದರೆ ಸರಿ. ಈ ಹಿಂದಿನ ಚುನಾವಣೆಯಲ್ಲಿ ನಾನು ಸೋತಿದ್ದೇನು ಎಂದರೆ ಸರಿ. ಈ ದಾವೆಯನ್ನು ಸರ್ವೆ ನಂ.62/1 ಮತ್ತು 42/1 ಮತ್ತು ಪಂಚಾಯತಿ ಮನೆಯ ಆಸ್ತಿಯ ಮೇಲೆ ಈ ದಾವೆ ಹೂಡಿರುತ್ತೇನೆ. ವಾದ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ಈ ದಾವೆಯನ್ನು ಜಮೀನುಗಳ ಮೇಲೆ ಮಾತ್ರ ಹೂಡಿದ್ದು ಮನೆ ಆಸ್ತಿಯ ವಿರುದ್ಧ ಹೂಡಿರುವುದಿಲ್ಲ.

**2.** ದಾವಾ ಆಸ್ತಿಗಳು ಮೂಲತಃ 1 ನೇ ವಾದಿಯ ಆಸ್ತಿಗಳು ಆಗಿರುತ್ತವೆ. ಆತನಿಗೆ ಆತನ ತಂದೆ ಮಾನಪ್ಪನಿಂದ ಬಂದಿರುತ್ತದೆ. 1 ನೇ ವಾದಿಗೆ 4 ಜನ ಸಹೋದರಿಯರು ಇರುತ್ತಾರೆ. ಸದರಿ ಸಹೋದರಿಯರು 1 ನೇ ವಾದಿಯ ವಿರುದ್ಧ ಪಾಲು ವಾಟ್ನಿ ದಾವೆ ಹೂಡಿರುತ್ತಾರೆ ಎಂದರೆ ಸರಿ. 1 ನೇ ವಾದಿಯು ಒಡಾಡಿಕೊಂಡು ಆರೋಗ್ಯವಾಗಿ ಇರುತ್ತಾನೆ ಎಂದರೆ ಸಾಕ್ಷಿಯು ಕಳೆದ ಮೂರು ವರ್ಷಗಳ ಹಿಂದೆ ಪಾಶ್ವವಾಯು ಆಗಿ ಒಡಾಡಲು ಆಗದಿರುವುದಾಗಿ ನುಡಿಯುತ್ತಾರೆ. ಆ ಕುರಿತು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ ಹಾಗೂ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಆತನು ನ್ಯಾಯಾಲಯಕ್ಕೆ ಬಂದರೆ ನಿಜಾಂಶ ತಿಳಿಯುತ್ತದೆ ಎಂದು ಅನಾರೋಗ್ಯವಾಗಿರುವುದಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**3.** ವಾದ ಪತ್ರದಲ್ಲಿ ಹಾಜರು ಪಡಿಸಿರುವ ವಂಶವೃಕ್ಷವು ಯಾವುದೇ ದಾಖಲೆಗಳ ಆಧಾರದ ಮೇಲೆ ಹಾಜರು ಪಡಿಸಿರುವುದಿಲ್ಲ. 2 ರಿಂದ 6 ನೇ ವಾದಿಗಳು 1 ನೇ ವಾದಿಯ ಹೆಂಡತಿ ಮಕ್ಕಳು ಎಂಬ ಕುರಿತು ಆಧಾರ ಕಾರ್ಡ ಮತ್ತು ಪಡಿತರ ಚೀಟಿ ಮತ್ತು ಕಂದಾಯ ದಾಖಲೆಗಳು ಮತ್ತು ವಂಶವೃಕ್ಷ ಇರುತ್ತದೆ. ಸದರಿ ದಾಖಲೆಗಳನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿರುವುದಿಲ್ಲ. ಪ್ರತಿವಾದಿಗಳು 1 ನೇ ವಾದಿಯ ಹೆಂಡತಿ ಮಕ್ಕಳು ಅಲ್ಲಾ ಎಂಬ ಕುರಿತು ಯಾವುದೇ ದಾಖಲೆಗಳು ಇರುವುದಿಲ್ಲ ಆದರೆ ನಾನು ಹೇಳುವ ಸಾಕ್ಷಿಯೇ ಆಧಾರವಾಗಿರುವುದಾಗಿ ನುಡಿಯುತ್ತಾರೆ.

**4.** ಪ್ರತಿವಾದಿಗಳ ಬಳಿ 1 ನೇ ವಾದಿಯ ಹೆಂಡತಿ ಮಕ್ಕಳು ಎಂಬ ಕುರಿತು ದಾಖಲೆಗಳು ಇವೆ ಎಂದರೆ ಸಾಕ್ಷಿಯು ಪಾಲು ವಾಟ್ನಿ ದಾವೆಯಲ್ಲಿ ತಿಳಿದಿರುವುದಾಗಿ ನುಡಿಯುತ್ತಾರೆ. ನಮ್ಮ ತಾಂಡಾದಲ್ಲಿ ನಾನು ಓದಿರುವ ಶಾಲೆ ಒಂದೇ ಇರುತ್ತದೆ ಎಂದರೆ ಸರಿ. ಅದೇ ಶಾಲೆಯಲ್ಲಿ 2 ರಿಂದ 6 ನೇ ಪ್ರತಿವಾದಿಗಳು ಓದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ನಮ್ಮ

ಊರಿನಲ್ಲಿ ವಾಸ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**5.** ನನ್ನ ತಂದೆ ತಾಯಿ ವಿವಾಹ ಆಗಿರುವ ದಿನಾಂಕ ಗೊತ್ತಿಲ್ಲ. 2 ನೇ ವಾದಿಯು 1 ನೇ ಪ್ರತಿವಾದಿಗಿಂತ ಕಿರಿಯ ವಯಸ್ಕಳು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯು 1 ನೇ ವಾದಿಯ ಮೊದಲ ಪತ್ನಿ ಎಂದರೆ ಸರಿಯಲ್ಲ. 2 ರಿಂದ 6 ನೇ ಪ್ರತಿವಾದಿಗಳು ಅವರ ಮಕ್ಕಳು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಜೀವಂತ ಕಾಲದಲ್ಲಿ 2 ನೇ ವಾದಿಯೊಂದಿಗೆ ನನ್ನ ತಂದೆ 2 ನೇ ವಿವಾಹ ಆಗಿರುತ್ತಾರೆ ಎಂದರೆ ಸರಿಯಲ್ಲ. ಆ ಕಾರಣ ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಹಕ್ಕು ನೀಡಬಾದೆಂಬ ಉದ್ದೇಶದಿಂದ ಸುಳ್ಳು ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ.

**ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.**

ತೆ.ನ್ಯಾದಲ್ಲಿ ಬೆ.ಮಾಡಲಾಯಿತು.

ಓ ಹೇ ಕೆ ಸರಿ ಇದೆ.

ನನ್ನ ಸಮಕ್ಷಮ

ಸಹಿ

ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.